ಮಾಡಬೇಕಾದುದು ಅನಿವಾರ್ಯವಾಗುತ್ತೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ಬಹಳ ನೊಂದ ಮನಸ್ಸಿಗೆ ತರುತ್ತಿದ್ದೇನೆ.

ಅಧ್ಯಕ್ಷರು : ನಿಮಗೆ ಈಗ ನೀರು ಬೇಕೋ ಅಥವಾ ಧರಣಿ ಬೇಕೋ?

ಶ್ರೀ ಆರ್.ಎಲ್.ಜಾಲಪ್ಪ : ಧರಣಿ ಮಾಡುವುದರಿಂದ ಅವರಿಗೆ ನೀರು ಬರುವುದಾದರೆ ಅವರು ಮಾಡಲಿ, ನಾವು ಅದಕ್ಕೆ ಅಡ್ಡಬರುವುದಿಲ್ಲ. ಆದರೆ ಅವರಿಗೆ ಬೇಕಾಗಿರತಕ್ಕದ್ದು ನೀರು.

ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು : ತಾವು ಕ್ಲಾರಿಫಿಕೇಷನ್ ಕೇಳಿದ್ದೀರಿ. ಅವರು ಉತ್ತರ ಕೊಡುವುದಕ್ಕೆ ನಿಂತಿದ್ದಾರೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಅವರು ಧರಣಿ ಮಾಡುವುದಾದರೆ ಮಾಡಲಿ ಎಂದು ಉತ್ತರವನ್ನು ಕೊಟ್ಟರೆ ನಾವೇನು ಹೇಳಬೇಕು?

ಶ್ರೀ ಆರ್. ನಾರಾಯಣ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳುತ್ತಿರುವುದು ಬಹಳ ಬೇಜವಾಬ್ದಾರಿ ಉತ್ತರವಾಗುತ್ತದೆ. ಇದು ಮಂತ್ರಿಗಳು ಉತ್ತರ ಕೊಡುವ ರೀತಿಯೇ? ಇದು ನಮ್ಮ ಜನರ ಸಮಸ್ಯೆಗೆ ಸ್ಪಂಧಿಸುವ ರೀತಿಯೇ? ಹಿಂದೆ ಈ ರೀತಿ ಬೇಜವಾಬ್ದಾರಿ ಉತ್ತರವನ್ನು ಯಾರೂ ಕೊಡುತ್ತಿರಲಿಲ್ಲ. ಇವರ ಬೇಜವಾಬ್ದಾರಿ ಉತ್ತರವನ್ನು ಪ್ರತಿಭಟಿಸಿ ನಾನು ವಾಕೌಟ್ ಮಾಡುತ್ತಿದ್ದೇನೆ.

(ಗೊಂದಲ)

(ಮಾನ್ಯ ಸದಸ್ಯರಾದ ಆದ ನಾರಾಯಣ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಎಸ್.ಆರ್. ಲಕ್ಷ್ಮಯ್ಯ : ಮಾನ್ಯ ಅಧ್ಯಕ್ಷರೆ, ಕಳೆದ ಒಂದೂವರೆ ತಿಂಗಳ ಹಿಂದೆ ಅವರು ಈಕಡೆ ಇದ್ದರು. ಆಗ ಏಕೆ ಇದನ್ನೆಲ್ಲಾ ಮಾಡಿಸಿಕೊಳ್ಳಲಿಲ್ಲ?

ಶ್ರೀ ಆರ್.ಎಲ್.ಜಾಲಪ್ಪ : ಮಾನ್ಯ ಅಧ್ಯಕ್ಷರೆ, ತಮಗೆಲ್ಲಾ ಗೊತ್ತಿರುವಂತೆ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿಯೇ ಜಿಲ್ಲಾ ಪರಿಷತ್ತು ಇರತಕ್ಕದ್ದು. ಈ ಸದನದ ಶಾಸಕರೆಲ್ಲರೂ ಜಿಲ್ಲಾ ಪರಿಷತ್ತುಗಳಿಗೆ ಸದಸ್ಯರಾಗಿರುತ್ತಾರೆ. ಜಿಲ್ಲಾಧಿಕಾರಿಗಳು ಅಲ್ಲಿ ಅಡ್ಮಿನಿಸ್ಟ್ರೇಟಿವ್ ಆಫೀಸರ್ ಆಗಿರುತ್ತಾರೆ. 1994-95ರ ಸಾಲಿನಲ್ಲಿ ಸರ್ಕಾರದ ವತಿಯಿಂದ ಸುಮಾರು 112 ಲಕ್ಷ ರೂ.ಗಳನ್ನು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಖರ್ಚುಮಾಡಲಾಗಿದೆ. ನಮ್ಮ ರವಿನ್ಯೂ ಇಲಾಖೆಯವರು ಈ ವಿಚಾರದಲ್ಲಿ ಯಾವಾಗ ಪ್ರವೇಶ ಮಾಡುತ್ತೇವೆಂದರೆ, ಜಿಲ್ಲಾ ಪರಿಷತ್ತಿನಲ್ಲಿ ನಾವು ಆಕ್ಷನ್ ಪ್ಲಾನ್ ಮಾಡಿಕೊಂಡಿದ್ದೇವೆ. ಸರ್ಕಾರ ಕೊಟ್ಟಿರತಕ್ಕ ಹಣ ಸಾಲುವುದಿಲ್ಲ, ಇನ್ನೂ ಹೆಚ್ಚಿಗೆ ಕೊಡಿ ಎಂದು ಕೇಳಿದರೆ ಆಗ ಸರ್ಕಾರದ ವತಿಯಿಂದ ಸಾಧ್ಯವಾದಷ್ಟು ಹಣವನ್ನು ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ತಮಗೆ ಬೇಕಾಗಿರತಕ್ಕದ್ದು ನೀರು. ನಿನ್ನೆ ರಾತ್ರಿ 9.30 ಗಂಟೆಗೆ ಮಾನ್ಯ ಜಿಲ್ಲಾಧಿಕಾರಿಯವರು ನನಗೆ ಕೊಟ್ಟಿರತಕ್ಕ ಮಾಹಿತಿಯನ್ನು ನಾನು ಹೇಳಿದ್ದೇನೆ. ಈಗ ಮಾನ್ಯ ಸದಸ್ಯರು ಹೇಳಿದ್ದನ್ನು ಗಮನದಲ್ಲಿಟ್ಟುಕೊಂಡು ನಾನೇ ನೇರವಾಗಿ ಅಲ್ಲಿನ ಜಿಲ್ಲಾಧಿಕಾರಿಯವರ ಜೊತೆ ಮಾತನಾಡಿ ಯಾವ ಯಾವ ತಾಲ್ಲೂಕುಗಳಲ್ಲಿ ಸಮಸ್ಯಾತ್ಮಕ ಹಳ್ಳಿಗಳಿವೆ. ಎಲ್ಲೆಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಇದೆ, ಇನ್ನೂ ಏನೇನು ತೊಂದರೆಗಳಿವೆ ಎಂಬ ಬಗ್ಗೆ ವಿವರಗಳನ್ನು ತೆಗೆದುಕೊಂಡು ಜಿಲ್ಲಾ ಪರಿಷತ್ತಿನವರ ಜೊತೆ ಮಾತನಾಡಿ ಸಂಬಂಧಪಟ್ಟ ಮಂತ್ರಿಗಳಿಗೂ ಹೇಳಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಪ್ರಯತ್ನಿಸುತ್ತೇವೆ. ತಾವು ಹಿಂದೆ ತಮ್ಮ ಸರ್ಕಾರದಲ್ಲೇ ಇದ್ದೀರಿ. ಆಗ ತಾವು ತಮ್ಮ